# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 575 |
| 2. ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 14.08.2025 |
| 4. ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋ ನಿಲ್ದಾಣಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳು ಮತ್ತು ಸುರಕ್ಷತಾ ಸಿಬ್ಬಂದಿ ಕಡಿಮೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಬಂದಿರುವುದಿಲ್ಲ.<br>ಬೆಂಗಳೂರು ಮೆಟ್ರೋ ರೈಲು ನಿಲ್ದಾಣಗಳಲ್ಲಿನ 83 ನಿಲ್ದಾಣಗಳಲ್ಲಿ 5780 ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಪ್ರತಿಯೊಂದು ಮೆಟ್ರೋ ಬೋಗಿಗಳಲ್ಲಿ 04 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳು ಪ್ರಯಾಣದ ಸಮಯದಲ್ಲಿ ಮೆಟ್ರೋ ಬೋಗಿಯ ಒಳಗಿನ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತವೆ.<br>ಬೆಂಗಳೂರು ಮೆಟ್ರೋದ ಎಲ್ಲಾ 83 ಮೆಟ್ರೋ ನಿಲ್ದಾಣಗಳು ಮತ್ತು 04 ಮೆಟ್ರೋ ಡಿಪೋಗಳಲ್ಲಿ ಭದ್ರತಾ ಅಧಿಕಾರಿಗಳು, ಮತ್ತು ಗೃಹ ರಕ್ಷಕ ದಳದ ಸಿಬ್ಬಂದಿಗಳು ಸೇರಿ ಸುಮಾರು ಒಟ್ಟಾರೆ 2950 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. |
| ಆ) | ಅನೇಕ ನಿಲ್ದಾಣಗಳಲ್ಲಿ ರಾಂಪ್-ಗಳು, ಟ್ಯಾಕ್ಟೈರ್ ಮಾರ್ಗಗಳು, ಬ್ರೈಲ್ ಚಿಹ್ನೆಗಳು ಇಲ್ಲದಿರುವುದು ಮತ್ತು ಕೋಚ್‌ಗಳಲ್ಲಿ ಪ್ರಾಥಮಿಕ ಆಸನಗಳ ಬಗ್ಗೆ ಧ್ವನಿ ಘೋಷಣೆ ಯಾವಾಗ ಲಭ್ಯವಾಗುತ್ತದೆ; | ಎಲ್ಲಾ ನಿಲ್ದಾಣಗಳಲ್ಲಿ ರಾಂಪ್-ಗಳು, ಟ್ಯಾಕ್ಟೈಲ್ ಮಾರ್ಗಗಳು ಮತ್ತು ಲಿಫ್ಟ್‌ನಲ್ಲಿ ಬ್ರೈಲ್ ಚಿಹ್ನೆಗಳು ಇರುತ್ತವೆ. ಬೋಗಿಗಳಲ್ಲಿ ಪ್ರಾಥಮಿಕ ಆಸನಗಳ ಬಗ್ಗೆ, ಧ್ವನಿ ಘೋಷಣೆಯನ್ನು ನಿಯಮಿತವಾಗಿ ಮಾಡಲಾಗುತ್ತದೆ. |
| ಇ) | ಫೇಸ್-2 ವಿಸ್ತರಣೆಗಳು ಸಿಒಆರ್‌ಆರ್ ಏರ್ಪೋರ್ಟ್ ಲೈನ್ ನಾಗಸಂದ್ರ, ಮಾದಾವರ ಗಡುವು ಮೀರಿ ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ.<br>ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2, 2ಎ ಮತ್ತು 2ಬಿಯ ರ ವಿಸ್ತರಣೆಗಳ ಮಾರ್ಗಗಳು ಕಾರ್ಯರಂಭಿಸಿರುವ ನಿಲ್ದಾಣಗಳು ಹಾಗೂ ಕಾರ್ಯರಂಭಗೊಳಿಸಬೇಕಾದ ಮಾರ್ಗಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ. |

| ಮಾರ್ಗ | ಉದ್ದ (ಕಿ.ಮೀ) | ಶೇ. ವಾರು ಪ್ರಗತಿ | ಕಾರ್ಯಾರಂಭಿಸಿದ/ ಯೋಜಿಸಿದ ದಿನಾಂಕ |
|---|---|---|---|
| ರೀಚ್-1 ಪೂರ್ವ ವಿಸ್ತರಣೆ ಕೃಷ್ಣರಾಜಪುರದಿಂದ ವೈಟ್‌ಫೀಲ್ಡ್ ವರಗೆ | 13.71 | 100 | 25.03.2023 ರಂದು ಕಾರ್ಯಾರಂಭಿಸಿದ |

| | | | | | |
|---|---|---|---|---|---|
| | | ರೀಚ್ -4 ದಕ್ಷಿಣ ವಿಸ್ತರಣೆ ಯಲಚೇನಹಳ್ಳಿ ಯಿಂದ ರೇಷ್ಮೆ ಸಂಸ್ಥೆ ವರೆಗೆ | 6.12 | 100 | 14.01.2021 ರಂದು ಕಾರ್ಯಾರಂಭಿಸಿದೆ |
| | | ರೀಚ್-2 ಪಶ್ಚಿಮ ವಿಸ್ತರಣೆ ಮೈಸೂರು ರಸ್ತೆಯಿಂದ - ಕೆಂಗೇರಿಯವರೆಗೆ | 7.53 | 100 | 29.08.2021 ರಂದು ಕಾರ್ಯಾರಂಭಿಸಿದೆ |
| | | ರೀಚ್-1 ಪೂರ್ವ ವಿಸ್ತರಣೆ ಬೈಯಪ್ಪನಹಳ್ಳಿ ಯಿಂದ – ಕೃಷ್ಣರಾಜಪುರ ದವರೆಗೆ | 2.10 | 100 | 09.10.2023 ರಂದು ಕಾರ್ಯಾರಂಭಿಸಿದೆ |
| | | ರೀಚ್-2 ಪಶ್ಚಿಮ ವಿಸ್ತರಣೆ ಕೆಂಗೇರಿ (ಹೊರತುಪಡಿಸಿ) – ಚಲ್ಲಘಟ್ಟದವರೆಗೆ | 2.05 | 100 | 09.10.2023 ರಂದು ಕಾರ್ಯಾರಂಭಿಸಿದೆ |
| | | ರೀಚ್-3 ಉತ್ತರ ವಿಸ್ತರಣೆ ನಾಗಸಂದ್ರದಿಂದ - ಮಾದಾವರದವರೆಗೆ | 3.14 | 100 | 07.11.2024 ರಂದು ಕಾರ್ಯಾರಂಭಿಸಿದೆ |
| | | ಹಂತ-2ಎ – ಒಆರ್‌ಆರ್ ಕೇಂದ್ರ ರೇಷ್ಮೆ ಮಂಡಳಿಯಿಂದ – ಕೃಷ್ಣರಾಜಪುರ ದವರೆಗೆ | 19.75 | 75 | ಸೆಪ್ಟೆಂಬರ್-2026 |
| | | ಹಂತ-2ಬಿ – ವಿಮಾನ ನಿಲ್ದಾಣ ಮಾರ್ಗ ಹೆಬ್ಬಾಳದಿಂದ– ಕೆಐಎ ಟರ್ಮಿನಲ್ ವರೆಗೆ | 27.44 | 58 | ಜೂನ್-2027 |
| | | ಹಂತ-2ಬಿ - ವಿಮಾನ ನಿಲ್ದಾಣ ಮಾರ್ಗ ಕೃಷ್ಣರಾಜಪುರದಿಂದ - ಹೆಬ್ಬಾಳದವರೆಗೆ | 11.00 | 41 | ಡಿಸಂಬರ್-2027 |
| | | ಹಂತ-2ಎ ಮತ್ತು 2ಬಿ (ಒಆರ್‌ಆರ್ ಮತ್ತು ವಿಮಾನ ನಿಲ್ದಾಣ ಮಾರ್ಗ)ಯು ಈ ಕೆಳಕಂಡ ಕಾರಣಗಳಿಂದ ವಿಳಂಬವಾಗಿರುತ್ತದೆ. | | | |

| | | |
|---|---|---|
| | | 1. ಹೈಕೋರ್ಟ್‌ನಿಂದ ಮರ ತೆರವುಗೊಳಿಸಲು ಅನುಮತಿ ಸಿಗುವಲ್ಲಿ ಆದ ವಿಳಂಬ ಮತ್ತು ಮರಗಳನ್ನು ಸ್ಥಳಾಂತರಿಸಲು ಬೇಕಾದ ಸಮಯ.<br>2. ರಸ್ತೆಯನ್ನು ಹಾಗೆ ಉಳಿಸಿಕೊಳ್ಳಲು ರಸ್ತೆಯ ನಡುವೆ ಯೋಜಿಸಿದ ಕಂಬದ (ಕಾನ್ಸೆಂಟ್ರಿಕ್ ಪಿಯರ್) ಬದಲಿಗೆ ರಸ್ತೆಯ ಎರಡೂ ಕಡೆ ಕಂಬಗಳನ್ನು (ಪೋರ್ಟಲ್ ಪಿಯರ್) ನಿರ್ಮಿಸಿರುವುದು.<br>3. ಗೇಲ್ ಗ್ಯಾಸ್ ಪೈಪ್‌ಲೈನ್ ಸ್ಥಳಾಂತರದಲ್ಲಿ ವಿಳಂಬ.<br>4. ಗೇಲ್ ಗ್ಯಾಸ್ ಪೈಪ್ ಲೈನ್ ಕಂಬಗಳು ತಳಪಾಯದ ತುಂಬಾ ಸಮೀಪದಲ್ಲಿ ಹೋಗಿರುವುದರಿಂದ ಕಾಮಗಾರಿಯನ್ನು ತುಂಬಾ ಜಾಗರೂಕತೆಯಿಂದ ಕೈಗೊಳ್ಳಬೇಕಾಗಿರುವುದು.<br>5. ಹೊರಮಾವು ಮತ್ತು ಹೆಚ್‌ಬಿಆರ್ ನಿಲ್ದಾಣಗಳ ನಡುವಿನ ಓವರ್‌ಹೆಡ್ ಹೆಚ್‌ಟಿ ಮಾರ್ಗವನ್ನು ನೆಲದಡಿಯ ಮಾರ್ಗವಾಗಿ ಪರಿವರ್ತಿಸಿರುವುದು.<br>6. ಯಲಹಂಕದಲ್ಲಿ ತೆರೆದು ಮುಚ್ಚಿದ ನಮೂನೆಯ ಸುರಂಗ ಮಾರ್ಗಕ್ಕೆ ಭಾರತೀಯ ವಾಯು ಪಡೆಯ ಭೂಮಿಯನ್ನು ಪಡೆಯುವಲ್ಲಿ ಆದ ವಿಳಂಬ.<br>7. ಹೆಬ್ಬಾಳ ಪ್ರದೇಶದಲ್ಲಿ ರಸ್ತೆ ಸುರಂಗ ಮತ್ತು ಅದರ ಇಳಿಜಾರುಗಳನ್ನು ಅಳವಡಿಸಲು ಅಗತ್ಯವಿರುವ ಬದಲಾವಣೆಗಳನ್ನು ಮಾಡುತ್ತಿರುವುದು. |
| (ಈ) | ಬೆಟ್ಟಹಲಸೂರು ಮೆಟ್ರೋ ನಿಲ್ದಾಣವನ್ನು ಕೈಬಿಟ್ಟಿದ್ದು, ಜುಲೈ, 2025ರಲ್ಲಿ ಕರ್ನಾಟಕ ಹೈಕೋರ್ಟ್ ನಿಲ್ದಾಣಗಳನ್ನು ಕೈಬಿಡುವ ನಿರ್ಧಾರವನ್ನು ಪ್ರಶ್ನಿಸುವ (ಪಿ.ಐ.ಆರ್.)ನ್ನು ತಿರಸ್ಕರಿಸಿದರೂ ಬಿ.ಎಂ.ಆರ್.ಸಿ.ಎಲ್. ಗೆ ಸ್ಥಳೀಯ ಜನರಿಂದ ಬಂದ ಮನವಿಗಳನ್ನು ಪರಿಗಣಿಸಲು ಸೂಚನೆ ಇದ್ದರೂ ಇದನ್ನು ರದ್ದು ಮಾಡಲು ಕಾರಣಗಳೇನು? (ವಿವರ ನೀಡುವುದು) | ಮೆ\|\| ಎಂಬೆಸ್ಸಿ ಗ್ರೂಪ್‌ರವರು ಬೆಟ್ಟಹಲಸೂರು ಮೆಟ್ರೋ ನಿಲ್ದಾಣಕ್ಕೆ ತಗಲುವ ವೆಚ್ಚವನ್ನು ಭರಿಸಲು ಒಪ್ಪಂದ ಮಾಡಿಕೊಂಡಿದ್ದರು. ಅದರಂತೆ ಬೆಟ್ಟಹಲಸೂರು ಮೆಟ್ರೋ ನಿಲ್ದಾಣವನ್ನು ನೀಲಿ ನಕ್ಷೆಯಲ್ಲಿ ಸೇರ್ಪಡೆ ಮಾಡಲಾಗಿತ್ತು. ಆದರೆ ಇಲ್ಲಿಯವರೆಗೂ ಮೆ\|\| ಎಂಬೆಸ್ಸಿ ಗ್ರೂಪ್‌ರವರು ಒಪ್ಪಂದದ ಪ್ರಕಾರ ಹಣವನ್ನು ಭರಿಸಿರುವುದಿಲ್ಲ. ಆದ ಕಾರಣ ಬೆಟ್ಟಹಲಸೂರು ಮೆಟ್ರೋ ನಿಲ್ದಾಣವನ್ನು ಹಂತ-2ಬಿಯ ನೀಲಿ ನಕ್ಷೆಯಿಂದ ಕೈಬಿಡಲಾಗಿರುತ್ತದೆ. |

ಕಡತ ಸಂಖ್ಯೆ: ನಅಇ 141 ಪಿ.ಆರ್.ಜೆ 2025

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ